


ಕೇವಲ ಹರೀಶನ ಒಂದು ಮಾತಿಗೆ ಅವಳ ಮನಸ್ಸು ಸಮಾಧಾನವಾಗಿ ಹಾರಾಡುತಿದ್ದುದು ತಿಳಿಯಿತು. ಸದ್ಯಕ್ಕೆ ಅವಳ ಪ್ರೇಮ ತಿಳಿಯಾಗಿತ್ತು. ನಾನು ನಗುತ್ತ, ''ಜೋಪಾನ, ಹರೀಶ್ ಬಂದಾಗ ಜಗಳಕ್ಕೆ ನಿಲ್ಲಬೇಡ, ತಿಳಿಯಾಗಿರು'' ಎಂದು ಜೋರಾಗಿ ನಕ್ಕೆ. ಎಂದಿನಂತೆ ಅಬ್ಬರದ ನಗೆ ಆ ತುದಿಯಿಂದ.

ಆಚೆ ಬಂದವಳಿಗೆ ಮನೆಯ ಮುಂದೆ ಹುಲ್ಲಿನ ಮೇಲೆ ಸುರುವಿದ ಹೂಗಳು, ನೆಂದ ಕಾಲೊರಸು, ಗೂಡಲ್ಲಿದ್ದರೂ ಸಿಡಿದ ಮಳೆಗೆ ನೆಂದ ನಾಯಿ ಮೈವಾಸನೆ, ನೆಲಕ್ಕೆ ಬಿದ್ದ ಬಳ್ಳಿಗಳು, ಮೀನುಗುಂಡಿಯಿಂದ ಆಚೆಬಂದು ನೆಲಕ್ಕೆ ಬಿದ್ದು ಒದ್ದಾಡುತ್ತಿದ್ದ ಒಂದು ಕೆಂಬಣ್ಣದ ಮೀನು, ಹಕ್ಕಿಗಳ ಕಿಚಿಪಿಚಿ, ಅಳಿಲ ಚಿಮ್ಮಿಮಿ... ಪಾಪಾ! ಅವರ ಗೂಡುಗಳಲ್ಲಿ ಏನು ಅನಾಹುತವೋ? ಮನೆ ಸುತ್ತಲೂ ತಿರುಗಿ ಅವನ್ನೆಲ್ಲ ಸರಿಪಡಿಸುತ್ತ, ಕೊಂಬೆ ಮುರಿದುಬಿದ್ದ ರಸ್ತೆಮರ ಕಣ್ಣಿಗೆ ಕಂಡಾಗ ಬೋಳು ಬೋಳೆನ್ನಿಸಿತು. ಬೇರೆ ಮರಗಳ ಕಡೆಯಿಂದ ನಿಧಾನಕ್ಕೆ ಸೂರ್ಯ ನಸು ಬಿಸಿಲಿನ ಬೆರಗನ್ನು ಹುಲ್ಲಿಗೆ ಹರಡುತ್ತ ಹಾರಾಡುವ ಗುಂಗಿಹುಳುಗಳಿಗೆ ಗುಂಗು ಹಿಡಿಸುತಿದ್ದ. ಪಾಪಾ! ಮಳೆಗೆ ಅವೂ ಏನಾದರೂ ಹಾನಿ ಅನುಭವಿಸಿರಬಹುದೇ?... ಅನ್ನಿಸಿತು. ನನ್ನಕ್ಕ ಒಮ್ಮೆ, ನನ್ನ ಮಗನನ್ನು ನಾನು ಮುದ್ದಿಸುವಾಗ ನಕ್ಕು ಛೇಡಿಸುತ್ತಿದ್ದ ಮಾತೊಂದು ನೆನಪಾಯಿತು.

''ಗುಂಗೂ ತನ್ನ ಮಗೂನ ಗಂಗಾಧರ ಅಂತಂತೆ ಕಣೆ.'' ಅವು ಜಗತ್ತಿನ ಸತ್ಯದರ್ಶನದ ಮಾತುಗಳಾದರೂ ತುಟಿಯ ಮೇಲೆ ನಗೆ ಹರಡಿತು. ಕಣ್ಣಿಗೆ ಕಾಣದ ಗುಂಗು, ಕಣ್ಣಿಗೆ ಕಾಣುವ ಗುಂಗು, ಅದರ ನಿಜದ ಬಾಳು. ಅಯ್ಯಬ್ಬಾ!

ತುಡುಬೆ ಜೇನು ಮುಂದಿನ ಹೊಂಗೆಮರದ ಸುತ್ತ ಹಾರಾಡುತ್ತಿದ್ದರೆ... ಹೂ ರಸ ಕುಡಿವ ಹೂ ಹಕ್ಕಿಗಳು ಕುಪ್ಪಳಿಸುವುದನ್ನು ಬಿಟ್ಟು ಹೂ ತಂಟೆಗೆ ಹೋಗದೆ ತಾರಾಡುತ್ತಿದ್ದವು. ಹೂವಿನ ಪರಾಗದೂಳಿಯೆಲ್ಲ ಮಳೆಯ ಬರಸಿಗೆ ಚೆಲ್ಲಾಡಿ, ಹೂವು ಹಲ್ಲುಗಿಂಜಿಕೊಂಡಿದ್ದವು. ಮಕರಂದ ಪಾತ್ರೆಯೂ ನೀರ ಹನಿಯಲ್ಲಿ ಮುಳುಗಿದ್ದವು. ಇದ್ದಕ್ಕಿದ್ದಂತೆ ನನ್ನೂರ ಮಳೆಗಾಲದ ದಿನಗಳು ಕಣ್ಣ ಮುಂದೆ ಬಂದು ಹುಯ್ಯತೊಡಗಿದವು.

**ಎಚ್.ಆರ್. ಸುಜಾತಾ**

ತಮ್ಮ ಬರಹಗಳಲ್ಲಿ ಬದುಕಿನ ಹಲವು ಮುಖಗಳ ಚಿತ್ರಣ ಕೊಡುವ ಸುಜಾತಾ, 'ನೀಲಿ ಮೂಗಿನ ನತ್ತು' ಎಂಬ ಲೇಖನಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಕವಿ, ಕತೆಗಾರ್ತಿಯಾಗಿರುವ ಅವರು ಅಂಕಣಕಾರರು ಕೂಡ. ಪತ್ರಿಕೆಗಳಲ್ಲಿ ಆಗಾಗ ತಮ್ಮ ಬರಹಗಳನ್ನು ಪ್ರಕಟಿಸುತ್ತ ಬಂದಿದ್ದಾರೆ. ಮಕ್ಕಳ ರಂಗಭೂಮಿ ಹಾಗೂ ಪತ್ರಿಕೋದ್ಯಮದಲ್ಲೂ ಕೆಲಸ ಮಾಡಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.